**<u>ಅಸಲು ದಾವಾ ಸಂಖ್ಯೆಃ -123/2024</u>** **ಪಿ.ಡಬ್ಲ್ಯೂ:-1**

ದಿನಾಂಕಃ **12-08-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-</u>

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಆಂಗ್ಲ ಭಾಷೆಯಲ್ಲಿ ಓದಲು ಬರೆಯಲು ಬರುವುದಿಲ್ಲ. ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ನನಗೆ ಗೊತ್ತು. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳನ್ನು ನಾನು ಮತ್ತು ನನ್ನ ತಂದೆಯವರು ಹೇಳಿ ನಮೂದು ಮಾಡಿಸಿರುತ್ತೇವೆ. 1 ನೇ ವಾದಿ ನನ್ನ ತಂದೆ. ನಾವು ಈ ದಾವೆಯನ್ನು ಮಲ್ಲಮ್ಮ ಮತ್ತು ಚನ್ನೇಶಪ್ಪರವರ ಮೇಲೆ ಸಲ್ಲಿಸಿದ್ದೇವೆ. ಪ್ರತಿವಾದಿಗಳು ನಮ್ಮ ಸಂಬಂಧಿಕರಲ್ಲ. ನಾವು ಮತ್ತು ಪ್ರತಿವಾದಿಗಳು ಬೀಜೋಗಟ್ಟೆ ಗ್ರಾಮದ ವಾಸಿಗಳು ಎಂದರೆ ಸರಿ. ಪ್ರತಿವಾದಿ 1 ಮತ್ತು 2 ತಾಯಿ ಮಗ ಎಂದರೆ ಸರಿ. ನನಗೆ ಈ ದಾವೆಯಲ್ಲಿ ಏನು ಪರಿಹಾರ ಕೋರಿ ದಾವೆಯನ್ನು ಸಲ್ಲಿಸಿದ್ದೇವೆ ಎಂದು ನನಗೆ ಖುದ್ದು ಮಾಹಿತಿ ಇರುತ್ತದೆ. ಈ ದಾವೆಯನ್ನು ನಾವು ಸರ್ವೇ ನಂ.18 ರ ಜಮೀನಿಗೆ ಸಂಬಂಧಪಟ್ಟಂತೆ ಸಲ್ಲಿಸಿದ್ದೇವೆ. ಈ ದಾವೆಯಲ್ಲಿ ನಾವು ಯಾವ ಯಾವ ದಾಖಲೆಗಳನ್ನು ಸಲ್ಲಿಸಿದ್ದೇವೆ ಎಂಬುದರ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನಿಪಿ-10 ಕ್ರಯ ಪತ್ರವನ್ನು ನೀಲಮ್ಮ ಎಂಬುವವರು 1 ನೇ ವಾದಿಗೆ ಬರೆದುಕೊಟ್ಟಿರುತ್ತಾರೆ. ಸದರಿ ನಿಪಿ-10 ಕ್ರಯ ಪತ್ರದಲ್ಲಿ 1 ನೇ ಪ್ರತಿವಾದಿ ಖರೀದಿ ಮಾಡಿದ ಸರ್ವೇ ನಂ.18/6 ತುಂಗಾ ನಾಲಾ ತರಿ ಜಮೀನು ಎಂದು ನಮೂದಾಗಿದೆ ಎಂದರೆ ಸರಿ. ಸದರಿ ಜಮೀನಿನಲ್ಲಿ 1 ಎಕರೆ 16 ಗುಂಟೆ ಜಮೀನಿನಲ್ಲಿ ಮಾತ್ರ ವ್ಯವಸಾಯ ಮಾಡುವ ಜಮೀನು ಎಂದರೆ ಸರಿ. ನಾಲಾ ತರಿ ಜಮೀನು ಎಂದರೆ ನಾಲೆಯಲ್ಲಿ ಬರುವ ನೀರನ್ನು

ಉಪಯೋಗಿಸಿಕೊಂಡು ವ್ಯವಸಾಯ ಮಾಡುವ ಜಮೀನು ಎಂದರೆ ಸರಿ. ಮಳೆಗಾಲ ಆದ ನಂತರ ನಾಲೆಯಲ್ಲಿ ನೀರನ್ನು ಬಿಡುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಪ್ರತಿವರ್ಷ ಆಗಸ್ಟ್ ತಿಂಗಳಲ್ಲಿ ನಾಲೆಗೆ ನೀರು ಬಂದ ನಂತರ ಬೆಳೆಯನ್ನು ಬೆಳಯುತ್ತೇವೆ ಎಂದರೆ ಸರಿ. ದಾವಾ ಆಸ್ತಿಯ ಸುತ್ತ ಮುತ್ತಲಿನ ಜಮೀನಿನವರು ಸಹ ನಾಲೆಯ ನೀರನ್ನು ಉಪಯೋಗಿಸಿಕೊಂಡು ವ್ಯವಸಾಯ ಮಾಡುತ್ತಾರೆ ಎಂದರೆ ಸರಿ. ಮಾರ್ಚ್ ಮತ್ತು ಏಪ್ರಿಲ್ ಬೇಸಿಗೆ ಕಾಲ ಎಂದರೆ ಸರಿ. ಬೇಸಿಗೆ ಕಾಲದಲ್ಲಿ ಸಾಮಾನ್ಯವಾಗಿ ಬೆಳೆಯನ್ನು ಬೆಳಯುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪಂಪ್ ಸೆಟ್ ಮತ್ತು ಬೋರ್ವೆಲ್ ಇರುವವರು ಬೆಳೆಯನ್ನು ಬೆಳಯುತ್ತಾರೆ ಎಂದು ನುಡಿಯುತ್ತಾರೆ. ನಿಪಿ-8 ಆರ್ ಟಿ ಸಿ ಯಲ್ಲಿ ಸರ್ವೇ ನಂ.18 ರಲ್ಲಿ ಒಟ್ಟು ವಿಸ್ತೀರ್ಣ 19 ಎಕರೆ 27 ಗುಂಟೆ ಜಮೀನು ಇದ್ದು ಅದರಲ್ಲಿ 1 ಎಕರೆ 20 ಗುಂಟೆ ಜಮೀನು ಇದ್ದು ಮತ್ತು ಕೃಷಿ ಯೋಗ್ಯ ಜಮೀನು 18 ಎಕರೆ 7 ಗುಂಟೆ ಜಮೀನು ಎಂದರೆ ಸರಿ. ನಿಪಿ-8 ಆರ್ ಟಿ ಸಿ ಯು 2023-24 ನೇ ಸಾಲಿನ ದಾಖಲೆ ಎಂದರೆ ಸರಿ. 2024-25 ನೇ ಸಾಲಿನಲ್ಲಿಯೂ ಸಹ ನಿಪಿ-8 ರಲ್ಲಿ ನಮೂದಾಗಿರುವಂತ ವಿಸ್ತೀರ್ಣ ಚಾಲ್ತಿಯಲ್ಲಿದೆ ಎಂದರೆ ಸರಿ. ದಾವಾ ಪತ್ರದಲ್ಲಿ ಹೇಳಿರುವಂತೆ ಸರ್ವೇ ನಂ.18 ರಲ್ಲಿ 1 ಎಕರೆ 32 ಗುಂಟೆ ಅದರಲ್ಲಿ 16 ಗುಂಟೆ ಖರಾಬು ಜಮೀನು ಇಲ್ಲ ಎಂದರೆ ಸರಿಯಲ್ಲ. 2023 ರಿಂದ 2025 ನೇ ಸಾಲಿನ ಆರ್ ಟಿ ಸಿ ಯಲ್ಲಿ ದಾವಾ ಆಸ್ತಿಯ 1 ಎಕರೆ 32 ಗುಂಟೆ ಜಮೀನು ನಮೂದಾಗಿರುವುದಿಲ್ಲ ಎಂದರೆ ಸರಿಯಲ್ಲ. ಹುಚ್ಚಪ್ಪರೆಡ್ಡಿ ಬಿನ್ ದೊಡ್ಡ ಭೀಮಪ್ಪರೆಡ್ಡಿ, ಮಲ್ಲಮ್ಮ ಕೋಂ ಬಸಪ್ಪ( ಪ್ರತಿವಾದಿಗಳು), ತಿಮ್ಮಪ್ಪ ಬಿನ್ ಹುಚ್ಚಪ್ಪ ಆಕ್ಕೆರ, ಕೃಷ್ಣಪ್ಪ ರೆಡ್ಡಿ ಬಿನ್ ಕೊಟ್ರಪ್ಪ, ಬಸಪ್ಪರೆಡ್ಡಿ ಬಿನ್ ಫಕೀರಪ್ಪ, ನಾಗರಾಜನಾಯ್ಕು ಬಿನ್ ಭೀಕ್ಯಾನಾಯ್ಕು, ವಸಂತರೆಡ್ಡಿ, ಬಸಪ್ಪ ರೆಡ್ಡಿ, ಶಶಿಕಲಾ ಕೋಂ ಗೋವರ್ಧನರೆಡ್ಡಿ, ಹನುಮಂತ ರೆಡ್ಡಿ ಬಿನ್ ನಾರಾಯಣ ರೆಡ್ಡಿ, ಶ್ರೀಧರ ಬಿನ್ ನಾರಾಯಣ ರೆಡ್ಡಿ, ಸುಜಾತ ಬಿನ್ ನಾರಾಯಣ ರೆಡ್ಡಿ, ಲಸ್ಕರಿ ನಾಯ್ಕು ಬಿನ್ ಧನುಜಾ ನಾಯ್ಕು, ಗೋವಿನಂದಪ್ಪ, ಹೇಮಪ್ಪ ರೆಡ್ಡಿ, ಧನಂಜಯ ರೆಡ್ಡಿ, ಮಹೇಶ ರೆಡ್ಡಿ, ತಿಮ್ಮಪ್ಪ ರೆಡ್ಡಿ, ವೆಂಕಟೇಶ ರೆಡ್ಡಿ, ಬಸಪ್ಪ ರೆಡ್ಡಿ, ಹನುಮಂತ ರೆಡ್ಡಿ, ಪದ್ಮಾಬಾಯಿ ರವರು ಗೊತ್ತು. ಆದರೆ ಬಾಬಾನಾಯ್ಕು ನನಗೆ ಗೊತ್ತಿಲ್ಲ. ಮೇಲ್ಕಂಡರವರು ಸರ್ವೇ

ನಂ.18 ರಲ್ಲಿರುವ 19 ಎಕರೆ ಜಮೀನಿನಲ್ಲಿ ಸಾಗುವಳಿಯನ್ನು ಮಾಡುತ್ತಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಮಲ್ಲಮ್ಮರವರು ಮಾಡುತ್ತಿಲ್ಲ ಮತ್ತು ಬಾಬಾನಾಯ್ಕನ ವಾರಸುದಾರರು ವ್ಯವಸಾಯ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಸರ್ವೇ ನಂ.18 ರಲ್ಲಿ ಪ್ರತಿವಾದಿಗಳು 23 ಗುಂಟೆ ಜಮೀನಿನಲ್ಲಿ ಸ್ವಾಧೀನಾನುಭವದಲ್ಲಿದ್ದುಕೊಂಡು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಅವರ ಪಿತ್ರಾರ್ಜಿತ ಕಾಲದಿಂದಲೂ ಸರ್ವೇ ನಂ.18 ರಲ್ಲಿ 23 ಗುಂಟೆ ಜಮೀನಿನಲ್ಲಿ ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಕಂದಾಯ ಅಧಿಕಾರಿಗಳ ನಿರ್ಲಕ್ಷತನದಿಂದಾಗಿ ಪಹಣಿಯಲ್ಲಿ ಸರ್ವೇ ನಂ.18 ರಲ್ಲಿ 23 ಗುಂಟೆ ಜಮೀನು ಪ್ರತಿವಾದಿಗಳ ಹೆಸರಿನಲ್ಲಿ ನಮೂದಾಗಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.